

بسم الله الرّحمٰن الرّحيم

# ನಾವು ಅಲ್ಲಾಹನ ಸಾಮಿಪ್ಯ ಹೊಂದಿದವರಾದರೆ, ನಮ್ಮ ಸ್ವಭಾವ ಗುಣಗಳ ಪರಿಷ್ಕರಣೆಯಾಗುವುದು. ನಮಗೆ ಲೌಕಿಕ ಅಭಿವೃದ್ಧಿಯೂ ಲಭಿಸುವುದು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **24-04-2015** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಇಂದಿನ ಕಾಲದಲ್ಲಿ ಒಂದು ಪ್ರಶ್ನೆ ಬಹಳ ಹೆಚ್ಚಾಗಿ ಹರಡಲಾಗುತ್ತಿದೆ. ಧರ್ಮದ ವಿರೋಧಿಗಳಾದವರು ಈ ಕೆಲಸ ಮಾಡುತ್ತಿದ್ದಾರೆ. ಪ್ರಶ್ನೆ ಇದಾಗಿದೆ: ಜನರಲ್ಲಿ ಒಳ್ಳೆಯ ಸ್ವಭಾವ ಗುಣಗಳಿದ್ದರೆ ಅಥವಾ ಲೌಕಿಕ ವಿದ್ಯಾಭ್ಯಾಸ ಉತ್ತಮ ಸ್ವಭಾವ ಗುಣಗಳಿಗೆ ಒಯ್ಯುತ್ತಿದೆಯಾದರೆ ಮತ್ತೆ ಧರ್ಮದ ಆವಶ್ಯಕತೆ ಏನಿದೆ? ಧರ್ಮ ಉತ್ತಮ ಸ್ವಭಾವ ಗುಣಗಳನ್ನು ಕಲಿಸುತ್ತಿದೆ ಎಂದು ಅದು ವಾದಿಸುತ್ತದೆ. ಅಥವಾ ಧರ್ಮದ ವಿಶ್ವಾಸಿಗಳು ಹಾಗೆ ಹೇಳುತ್ತಾರೆ. ಆದರೆ ಇಲ್ಲಿ ನಾವು ಧರ್ಮರಹಿತರಾಗಿದ್ದರೂ ನಮ್ಮಲ್ಲಿ ಒಳ್ಳೆಯ ಸ್ವಭಾವ ಗುಣಗಳು ಇವೆ ಎಂದು ಅವರು ಹೇಳುತ್ತಾರೆ. ಮಾತ್ರವಲ್ಲ ಧಾರ್ಮಿಕ ನಂಬಿಕೆ ಹೊಂದಿಲ್ಲದ ಲೌಕಿಕ ಜನರಲ್ಲಿ ಬಹುತೇಕ ಮಂದಿಯ ಸ್ವಭಾವ ಗುಣಗಳು ಧರ್ಮಾವಲಂಬಿಗಳಾದ ಜನರ ಸ್ವಭಾವ ಗುಣಗಳಿಗಿಂತ ಹೆಚ್ಚು ಉತ್ತಮವಾಗಿದೆ ಎಂದು ಸಹ ಅವರು ಹೇಳುತ್ತಾರೆ. ವಿಶಿಷ್ಟವಾಗಿ ಇಸ್ಲಾಮ್ ಧರ್ಮವನ್ನು ಈ ಆಕ್ಷೇಪಕ್ಕೆ ಹೆಚ್ಚಾಗಿ ಗುರಿಪಡಿಸಲಾಗುತ್ತದೆ. ಇಸ್ಲಾಮ್‌ನ ಹೊರತು ಇನ್ನಿತರ ಧರ್ಮಗಳ ಅನುಯಾಯಿಗಳಲ್ಲಿ ಬಹುಸಂಖ್ಯಾತರು ಅವರ ಧರ್ಮದಿಂದ ಹೆಚ್ಚು ಕಡಿಮೆ ದೂರ ಸರಿದಿರುತ್ತಾರೆ. ಆದರೆ ಇಸ್ಲಾಮ್ ಧರ್ಮದ ಅನುಯಾಯಿಗಳು ಎಂದು ಹೇಳಿಕೊಳ್ಳುವವರಲ್ಲಿ ಬಹು ಸಂಖ್ಯಾತರು ತಾವು ಇಸ್ಲಾಮ್ ಧರ್ಮವನ್ನು ನಂಬುತ್ತೇವೆಂದು ಹೇಳುವವರಾಗಿದ್ದಾರೆ. ಧಾರ್ಮಿಕ ಕರ್ಮಗಳನ್ನು ಅನುಷ್ಠಿಸದ ಬಹುತೇಕ ಮುಸ್ಲಿಮರು ಸಹ ತಾವು ಮುಸ್ಲಿಮರೆಂದು ಬಹಿರಂಗವಾಗಿ ಹೇಳಿಕೊಳ್ಳುತ್ತಾರೆ. ಆದುದರಿಂದ ನಿಜವಾದ ಆಕ್ರಮಣ ಇಸ್ಲಾಮಿನ ಮೇಲೆ ನಡೆಯುತ್ತದೆ. ಧರ್ಮದಿಂದ ಮುಸ್ಲಿಮರನ್ನು ದೂರಸರಿಸಲು ವಿವಿಧ ರೀತಿಗಳಲ್ಲಿ ಪ್ರಯತ್ನ ಮಾಡಲಾಗುತ್ತಿದೆ. ವಿವಿಧ ಅಂಶಗಳನ್ನು ಮುಂದಿರಿಸಿ ನಮ್ಮ ಮಕ್ಕಳನ್ನು ಮತ್ತು ಯುವಕರ ಬುದ್ಧಿಯನ್ನು ವಿಷದಿಂದ ತುಂಬಲು ಪ್ರಯತ್ನಿಸಲಾಗುತ್ತಿದೆ. ವಿಶಿಷ್ಟವಾಗಿ ಇದು ನಡೆಯುತ್ತಿರುವುದು ಪಶ್ಚಿಮದ ದೇಶಗಳಲ್ಲಿ. ಈ ದೇಶಗಳಲ್ಲಿ ಸಂಶೋಧನೆಗಳಿಗೆ ಹೆಚ್ಚು ಗಮನ ಹರಿಸಲಾಗುತ್ತಿದೆ. ಇದು ಬಹಳ ಉತ್ತಮ ಕೆಲಸವೇ ಆಗಿದೆ. ಆದರೆ ಸಂಶೋಧನೆ ಸರಿಯಾದ ರೀತಿಯಲ್ಲಿರಬೇಕಾದುದು ಸಹ ಆವಶ್ಯಕವಾಗಿದೆ.

ಯುವ ಪ್ರಾಯದ ಹುಡುಗರು ಮತ್ತು ಹುಡುಗಿಯರು ತಮ್ಮ ಮನೆಗಳಲ್ಲಿ ತಂದೆ ತಾಯಂದಿರೊಂದಿಗೆ ಮತ್ತು ಹಿರಿಯರೊಂದಿಗೆ ವಿವಿಧ ಸಮಸ್ಯೆಗಳಿಗೆ ಪರಿಹಾರ ಪಡೆಯಲು ಹೋಗುವಾಗ ಅವರ ಪ್ರಶ್ನೆಗಳಿಗೆ ಉತ್ತರ ನೀಡುವುದಕ್ಕೆ ಬದಲಾಗಿ ಕೆಲವು ಸಾರಿ ಅವರನ್ನು ದಬಾಯಿಸಲು ಪ್ರಯತ್ನ ಮಾಡಲಾಗುತ್ತಿದೆ. ಈ ಕಾರಣದಿಂದ ಯೌವ್ವನಕ್ಕೆ ಹೆಜ್ಜೆ ಹಾಕುವ ಮಕ್ಕಳು ಹೀಗೆ ಯೋಚಿಸುತ್ತಾರೆ: ಇಸ್ಲಾಮ್ ಧರ್ಮ ಸತ್ಯ ಧರ್ಮವೆಂದು ವಾದಿಸಿ ಅದರಲ್ಲಿ ಎಲ್ಲ ಸಮಸ್ಯೆಗಳಿಗೆ ಉತ್ತರವಿದೆ ಎಂದು ಹೇಳುತ್ತಿದ್ದರೂ ಈ ಕಾಲಘಟ್ಟಕ್ಕೆ ಅನುಸಾರವಾದ ಕರ್ಮ ಸಂಬಂಧವಾದ ಪರಿಹಾರವನ್ನು ನೀಡಲು ಅದು ವಿಫಲವಾಗಿದೆ ಎಂದು ಅವರು ಯೋಚಿಸುತ್ತಾರೆ.

ಇದಲ್ಲದೆ ಮಕ್ಕಳಿಗೆ ಕಲಿಸಲಾಗುವ ಧಾರ್ಮಿಕ ಶಿಕ್ಷಣ ಮತ್ತು ಅವರ ಹಿರಿಯರ ವರ್ತನೆ ಇವುಗಳ ಮಧ್ಯೆ ವೈರುದ್ಧ್ಯವಿರುತ್ತದೆ. ಮಕ್ಕಳು ಧರ್ಮದ ಉಪದೇಶಗಳನ್ನು ಆಲಿಸಿ ಸುಮ್ಮನಿರುತ್ತಾರೆ. ಆದರೆ ಅವರಿಗೆ ಸ್ವಾತಂತ್ರ್ಯ ಲಭಿಸಿದಾಗ ಅವರು ಧರ್ಮದಿಂದ ದೂರ ಸರಿಯುತ್ತಾರೆ. ಅವರು ಧರ್ಮದಿಂದ ದೂರ ಸರಿಸುವವರ ಅಧೀನಕ್ಕೊಳಗಾಗುತ್ತಾರೆ. ಇದೇ ಕಾರಣದಿಂದ ಇಸ್ಲಾಮ್ ಧರ್ಮದಲ್ಲಿ ಸುಂದರ ಉಪದೇಶಗಳಿದ್ದರೂ ಅದು ಜೀವಂತ ಧರ್ಮವಾಗಿದ್ದರೂ ಮುಸ್ಲಿಮರಲ್ಲಿ ಎಂತಹ ಜನರು ಕಾಣಿಸುತ್ತಾರೆಂದರೆ ಅವರು ಧರ್ಮ ಮತ್ತು ದೇವನನ್ನು ನಿರಾಕರಿಸುವವರಾಗಿದ್ದಾರೆ.

ಇಂತಹ ಪರಿಸ್ಥಿತಿಯಲ್ಲಿ ನಮ್ಮ ಪೈಕಿ ಪ್ರತಿಯೊಬ್ಬನೂ ತಾನು ಧರ್ಮವನ್ನು ಅನುಷ್ಠಿಸುವವನಾಗಿದ್ದುಕೊಂಡು ತನ್ನ ಸಂತಾನವನ್ನು ಸಹ ಅದೇ ರೀತಿ ಮಾಡಲು ಗಮನ ಹರಿಸಬೇಕಾದುದು ಅತೀ ಆವಶ್ಯಕವಾಗಿದೆ. ಈ ಕಾಲಘಟ್ಟದಲ್ಲಿ ಅಲ್ಲಾಹನು ನಮಗೆ ಅನುಗ್ರಹ ದಯಪಾಲಿಸಿದ್ದಾನೆ. ಈ ಸಮಸ್ಯೆಗಳನ್ನು ಪರಿಹರಿಸಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಅಲ್ಲಾಹನು ಕಳುಹಿಸಿದ್ದಾನೆ. ಸಮಸ್ಯೆಗಳನ್ನು ಮನವರಿಕೆ ಮಾಡಿಕೊಳ್ಳುವುದನ್ನು ಮತ್ತು ಅದಕ್ಕೆ ಪರಿಹಾರ ಕಂಡುಕೊಳ್ಳುವುದನ್ನು ನಮಗೆ ಸುಲಭಗೊಳಿಸಲಾಗಿದೆ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಇದರ ಬಗ್ಗೆ ಒಂದು ಖುತ್‌ಬ ನೀಡಿದ್ದರು. ಸ್ವಭಾವ ಗುಣಗಳ ಪರಿಷ್ಕರಣೆಯೊಂದಿಗೆ ಲೌಕಿಕ ಅಭಿವೃದ್ಧಿ ಮತ್ತು ಧರ್ಮದೊಂದಿಗಿರುವ ಸಂಬಂಧ ಮತ್ತು ಇಸ್ಲಾಮ್ ಅದರ ಬಗ್ಗೆ ಹೊಂದಿರುವ ದೃಷ್ಟಿಕೋನ ಇವುಗಳನ್ನು ವಿವರಿಸಿದ್ದಾರೆ. ಹಝ್ರತ್ ಮುಹಮ್ಮದ್ ﷺರು ಹೇಗೆ ತನ್ನ ನಡೆವಳಿಕೆಗಳಿಂದ ನಮಗೆ ಉಪದೇಶಿಸಿದರು ಎನ್ನುವುದರ ಬಗ್ಗೆ ಪ್ರಸ್ತಾಪಿಸಿದ್ದಾರೆ.

ಇಸ್ಲಾಮ್ ಪ್ರಕೃತಿ ಧರ್ಮವಾಗಿದೆ ಎಂಬುದನ್ನು ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್

ರಝಿಯಲ್ಲಾಹು ಅನ್‌ಹು ಹೀಗೆ ಹೇಳಿದರು: "ಧರ್ಮ, ಉತ್ತಮ ಸ್ವಭಾವ ಗುಣಗಳು ಮತ್ತು ಶಾರೀರಿಕ ಆವಶ್ಯಕತೆಗಳು ಪರಸ್ಪರ ಸಮ್ಮಿಳನ ಗೊಂಡಿರುತ್ತವೆ. ಅವುಗಳಲ್ಲಿ ವ್ಯತ್ಯಾಸ ಮಾಡುವುದು ಕಷ್ಟಸಾಧ್ಯ. ಎಂದರೆ ಧರ್ಮವನ್ನು ದೃಢವಾಗಿ ನಂಬುವವನು ಉತ್ತಮ ಸ್ವಭಾವ ಗುಣಗಳನ್ನು ಧರ್ಮದಿಂದ ದೂರ ಸರಿಸಲಾರನು. ಧರ್ಮವು ನನ್ನನ್ನು ಲೌಕಿಕ ಕಾರ್ಯಗಳಿಂದ ನಿರ್ಲಕ್ಷ್ಯತೆ ಹೊಂದುವಂತೆ ಮಾಡಿದೆ ಅಥವಾ ನನಗೆ ಅವುಗಳು ಆವಶ್ಯಕತೆ ಇಲ್ಲ ಎಂದು ಸಹ ಅವನು ಹೇಳಲಾರ. ನನಗೆ ಈಗ ಯಾವ ವಸ್ತುವಿನ ಆವಶ್ಯಕತೆಯೂ ಇಲ್ಲ ಎಂದು ಯೋಚಿಸಿದರೆ ಮಾನವನ ಅಭಿವೃದ್ಧಿಯ ಚಕ್ರ, ಎಂದರೆ ಲೌಕಿಕ ಅಭಿವೃದ್ಧಿಯ ಚಕ್ರ ಅಲ್ಲಿಗೆ ನಿಂತು ಹೋಗುತ್ತದೆ. ಇವುಗಳೆಲ್ಲ ಪರಸ್ಪರ ಒಂದಕ್ಕೊಂದು ಜೋಡಿಸಿಕೊಂಡಿರುವವುಗಳಾಗಿವೆ. ಧರ್ಮ, ಉತ್ತಮ ಸ್ವಭಾವ ಗುಣ ಮತ್ತು ಲೌಕಿಕ ಅಭಿವೃದ್ಧಿ.

ಆದರೆ, ಇವುಗಳು ಪರಸ್ಪರ ಜೋಡಿಸಿಕೊಂಡಿವೆಯಾದರೂ ಅವುಗಳ ಮಧ್ಯೆ ವ್ಯತ್ಯಾಸಗಳೂ ಇವೆ. ಧರ್ಮವನ್ನು ನಂಬದವರು 'ಉತ್ತಮ ಸ್ವಭಾವ ಗುಣಗಳು ಮತ್ತು ಲೌಕಿಕ ಅಭಿವೃದ್ಧಿ ಮನುಷ್ಯನಿಗೆ ಆವಶ್ಯಕವಾಗಿದೆ' ಎಂದು ಹೇಳಿಕೊಂಡು ಬಿಡುಗಡೆ ಹೊಂದಲು ಪ್ರಯತ್ನಿಸುತ್ತಾರೆ. ಆದರೆ ಒಬ್ಬ ನೈಜ ಮುಸ್ಲಿಮನು ನನಗೆ ಧರ್ಮದ ಸಹ ಆವಶ್ಯಕತೆ ಇದೆ. ಅದು ನನ್ನನ್ನು ಅಲ್ಲಾಹನ ಸಮೀಪಕ್ಕೆ ತಲಪಿಸುವ ಮಾರ್ಗವಾಗಿದೆ ಎಂದು ಹೇಳುವನು."

ಇದು ಯೋಚನೆಯಲ್ಲಿರುವ ವ್ಯತ್ಯಾಸವಾಗಿದೆ. ನಾವು ಇವುಗಳನ್ನು ಹೇಗೆ ನೋಡಬೇಕು ಮತ್ತು ಅವುಗಳ ಮಧ್ಯೆ ಹೇಗೆ ಸಂಬಂಧ ಜೋಡಿಸಬೇಕು ಎಂದು ಯೋಚಿಸಬೇಕಾಗಿದೆ. ಇತರ ಧರ್ಮಗಳು ಮೃತಪ್ರಾಯವಾಗಿವೆ. ಇಂದು ಇಸ್ಲಾಮ್ ಮಾತ್ರವೇ ಇವುಗಳ ಮಧ್ಯೆ ಸಂಬಂಧವನ್ನು ಸಾಬೀತುಗೊಳಿಸುವ ಏಕಮಾತ್ರ ಧರ್ಮವಾಗಿದೆ. ಆದರೆ ಮುಸ್ಲಿಮರಲ್ಲಿ ಬಹುಸಂಖ್ಯಾತ ಜನರು ಧರ್ಮದ ವಾಸ್ತವಿಕತೆ ಏನೆಂದು ಮನವರಿಕೆ ಮಾಡಿಕೊಳ್ಳದೆ ನೈತಿಕಗುಣಗಳಿಗೆ ಸಂಬಂಧಿಸಿದ ವಿಷಯಗಳನ್ನು ಮತ್ತು ಲೌಕಿಕ ವಿಷಯಗಳನ್ನು ಧರ್ಮದೊಂದಿಗೆ ಜೋಡಿಸುವಲ್ಲಿ ಬಹಳ ಅತಿರೇಕದಿಂದ ವರ್ತಿಸುವವರಾಗಿದ್ದಾರೆ. ಧರ್ಮವನ್ನು ಸುಂದರವಾಗಿ ಲೋಕದ ಮುಂದಿರಿಸಿ ಜನರನ್ನು ಅದರ ಕಡೆಗೆ ಆಕರ್ಷಿಸುವುದಕ್ಕೆ ಬದಲಾಗಿ ಅವರು ಧರ್ಮದಿಂದ ಜನರನ್ನು ದೂರ ಸರಿಸುತ್ತಿದ್ದಾರೆ.

ಇದೇ ಕಾರಣದಿಂದ ವಿವಿಧ ಭೀಕರವಾದಿ ಗುಂಪುಗಳು ತಮ್ಮದೇ ಆಗಿರುವ ಇಸ್ಲಾಮನ್ನು ಜಾರಿಗೊಳಿಸಲು, ತಾವೇ ರಚಿಸಿದ ಕಾನೂನು ಕಾಯಿದೆಗಳನ್ನು ಜಾರಿಗೊಳಿಸಲು, ಕೊಲೆ ರಕ್ತಪಾತಗಳನ್ನು ಮಾಡುತ್ತಿದ್ದಾರೆ. ಸಿರಿಯಾದಲ್ಲಿ, ಇರಾಕ್‌ನಲ್ಲಿ, ಅಫ್‌ಗಾನಿಸ್ಥಾನದಲ್ಲಿ ಮತ್ತು ಪಾಕಿಸ್ತಾನದಲ್ಲಿ ತಾವೇ ರಚಿಸಿದ ಕಾನೂನು ಕಾಯಿದೆಗಳ ಮೂಲಕ ಕೊಲೆ ನಡೆಸುತ್ತಿದ್ದಾರೆ. ಯಮನ್‌ನಲ್ಲಿ ಸಂಭವಿಸುತ್ತಿರುವುದರ ಕಾರಣವೂ ಇದೇ ಆಗಿದೆ. ಇವರು ತಮ್ಮ ಇಷ್ಟಪ್ರಕಾರದ ಫತ್ವಗಳಿಗೆ ಧರ್ಮದ ಹೆಸರು ನೀಡಿ ನಿರಪರಾಧಿಗಳಾದ ಜನರ ಮೇಲೆ ವಿಮಾನ ಧಾಳಿ ನಡೆಸಿ ರಕ್ತ ಹರಿಸುತ್ತಿದ್ದಾರೆ.

ಯಥಾರ್ಥ ಇಸ್ಲಾಮ್ ಧರ್ಮ ಮತ್ತು ಈ ಜನರು ಅವಲಂಬಿಸುವ ಇಸ್ಲಾಮ್ ಮಧ್ಯೆ ಯಾವುದೇ ವಾಸ್ತವಿಕ ಸಂಬಂಧವಿರುವುದಿಲ್ಲ. ಇದೇ ಕಾರಣದಿಂದ ಮೌಲವಿಗಳನ್ನು ಮತ್ತು ಫತ್ವ ನೀಡುವವರನ್ನು ಹಿಂಬಾಲಿಸುವ ಮುಸ್ಲಿಮರಲ್ಲಿ ಬಹುತೇಕ ಜನರು ಇಸ್ಲಾಮ್‌ನಿಂದ ದೂರ ಸರಿದು ಹೋಗಿರುತ್ತಾರೆ.

ಆದರೆ ಧರ್ಮದಿಂದ ಯಾರಿಗಾದರೂ ಲಾಭ ಸಿಗುವುದಾದರೆ ಅದು ಸ್ವಭಾವ ಗುಣಗಳನ್ನು ಉತ್ತಮ ಪಡಿಸುವ ಮೂಲಕವಾಗಿದೆ. ಅದಕ್ಕೋಸ್ಕರ ಸರಿಯಾದ ಧರ್ಮವನ್ನು ಅವಲಂಬಿಸಬೇಕಾದ ಆವಶ್ಯಕತೆಯಿದೆ. ಧರ್ಮದ ಬಗ್ಗೆ ಭಯವೂ ಇರಬೇಕಾಗಿದೆ. ಯಾವ ಜನರಲ್ಲಿ ಉತ್ತಮ ಸ್ವಭಾವ ಗುಣಗಳು ಮೊದಲೇ ಇವೆಯೋ ಅವರು ಹೇಳುತ್ತಾರೆ: ನಮಗೆ ಧರ್ಮದ ಆವಶ್ಯಕತೆ ಏನಿದೆ? ಎಂದು. ಆದರೆ ಯೋಚನೆ ಮಾಡಿದರೆ ತಿಳಿಯಬಹುದು– ಲೌಕಿಕ ಅಭಿವೃದ್ಧಿ, ಉತ್ತಮ ಸ್ವಭಾವ ಗುಣಗಳು ಮತ್ತು ಧರ್ಮ ಎಷ್ಟು ಸಮೀಪವಾಗಿವೆ ಎಂದರೆ ಸಾಮಾನ್ಯ ಜನರಿಗೆ ಅದನ್ನು ಅರ್ಥ ಮಾಡಲು ಸಾಧ್ಯವಿಲ್ಲ. ಒಂದರ ಪರಿಮಿತಿ ಎಲ್ಲಿ ಪ್ರಾರಂಭವಾಗುತ್ತದೆ ಮತ್ತು ಅದು ಎಲ್ಲಿ ಕೊನೆಗೊಳ್ಳುತ್ತದೆ ಎಂದು ತಿಳಿಯಲು ಸಾಧ್ಯವಿಲ್ಲ.

ಇವುಗಳನ್ನು ಅರ್ಥ ಮಾಡಿಕೊಳ್ಳಲು ನಾವು ಹಝ್ರತ್ ಮುಹಮ್ಮದ್ﷺರ ಪವಿತ್ರ ಜೀವನವನ್ನು ಅಧ್ಯಯನ ಮಾಡಬೇಕು. ಹಝ್ರತ್ ಮುಹಮ್ಮದ್ﷺರು ಲೌಕಿಕ ಸುಧಾರಕರೂ ಆಗಿದ್ದರು. ನೈತಿಕ ಸುಧಾರಕರೂ ಆಗಿದ್ದರು. ಆಧ್ಯಾತ್ಮಿಕ ಸುಧಾರಕರೂ ಆಗಿದ್ದರು. ಹಝ್ರತ್ ಮುಹಮ್ಮದ್ﷺರ ಪವಿತ್ರ ಜೀವನ ಈ ಎಲ್ಲವುಗಳ ಸಂಯೋಜನೆಯಾಗಿದೆ. ಅವರು **ಅದ್ದುಆಉ ಮುಖ್ಖುಲ್ ಇಬಾದಃ** (ಪ್ರಾರ್ಥನೆ ಆರಾಧನೆಯ ತಿರುಳು) ಎಂದು ಹೇಳುತ್ತಿದ್ದರು. ಅವರು ಆಧ್ಯಾತ್ಮಿಕತೆಯನ್ನು ಪರಿಪೂರ್ಣತೆಗೊಳಿಸುವ ಬಗ್ಗೆ ಒತ್ತಿ ಹೇಳುತ್ತಿದ್ದರು.

ದುಆ ಅಥವಾ ಪ್ರಾರ್ಥನೆ, ಇದರಲ್ಲಿ ಮೂರು ಅಂಶಗಳಿರಬೇಕಾದುದು ಆವಶ್ಯಕವೆಂದು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳಿದ್ದಾರೆ. ಮೊದಲನೆಯದು, ನನ್ನ ಪ್ರಾರ್ಥನೆಯನ್ನು ಅಲ್ಲಾಹನು ಸ್ವೀಕರಿಸುವನೆಂಬ ದೃಢವಿಶ್ವಾಸವಿರಬೇಕು. ಎರಡನೆಯದು, ನಾನು ಯಾರನ್ನು ಕರೆದು ಪ್ರಾರ್ಥಿಸುತ್ತಿರುವೆನೋ ಅವನಿಗೆ ನನಗೆ ಸಹಾಯ ಮಾಡುವ ಶಕ್ತಿ ಇದೆ ಎಂಬ ದೃಢವಿಶ್ವಾಸ ಇರಬೇಕು. ಮೂರನೆಯದು, ಪ್ರಕೃತಿ ಸಹಜವಾದ ಪ್ರೀತಿಯ ಸಂಬಂಧವಾಗಿದೆ. ಅನ್ಯ ವಸ್ತುಗಳ ಕಡೆಗೆ ನೋಡದೆ ತನ್ನ ಪ್ರಿಯ ದೇವನ ಕಡೆಗೆ ಮಾತ್ರ ಒಯ್ಯುವಂತಹ ಸಂಬಂಧ. ಇದಕ್ಕೆ ಉದಾಹರಣೆಯನ್ನು ತಾಯಿ ಮತ್ತು ಮಗುವಿನ ಸಂಬಂಧದಲ್ಲಿ ನಮಗೆ ಕಾಣಬಹುದು. ಮಗುವಿಗೆ ತಾಯಿಯೊಂದಿಗೆ ಸಹಜವಾದ ಪ್ರಕೃತಿ ಸಂಬಂಧವಿರುತ್ತದೆ.

ತಾಯಿ ತನಗೆ ಸಹಾಯ ಮಾಡಲು ಸಾಧ್ಯವೋ ಇಲ್ಲವೋ ಎನ್ನುವುದನ್ನು ಪರಿಗಣಿಸದೆ ಮಗು ತಾಯಿಯನ್ನೇ ಕೂಗಿ ಕರೆಯುತ್ತದೆ. ಸಮುದ್ರದಲ್ಲಿ ಮುಳುಗಿ ಹೋಗುತ್ತಿರುವ ಮಗು ತನ್ನ ತಾಯಿಗೆ ಈಜಲು ಬರುವುದಿಲ್ಲ ಎಂದು ತಿಳಿದುಕೊಂಡು ಸಹ ಅದು ತಾಯಿಯನ್ನೇ ನೆರವಿಗಾಗಿ ಕೂಗಿ ಕರೆಯುವಂತಹ ಸಮೀಪ ಸಂಬಂಧ ಹೊಂದಿರುತ್ತದೆ. ಅದು ಬೇರೆ ಯಾರನ್ನೂ ಕೂಗಿ ಕರೆಯಲಾರದು. ಇದೊಂದು ರೀತಿಯ ಭಾವನಾತ್ಮಕ ಸಂಬಂಧವಾಗಿದೆ. ಇದರ ಬಗ್ಗೆ ಹಝ್ರತ್ ಮುಹಮ್ಮದ್ﷺ ಹೇಳಿದರು: **ಅದ್ದುಆಉ ಮುಖ್ಖುಲ್ ಇಬಾದಃ** ಎಂದರೆ ಪ್ರಾರ್ಥನೆ ಮಾಡದೆ ಮನುಷ್ಯನ ವಿಶ್ವಾಸ ಪರಿಪೂರ್ಣವಾಗಲಾರದು. ಹಝ್ರತ್ ಮುಹಮ್ಮದ್ﷺರು ಮನುಷ್ಯ ಮತ್ತು ಅಲ್ಲಾಹನ ಮಧ್ಯೆ ಇರುವ ಸಂಬಂಧ ತಾಯಿಯ ಮತ್ತು ಮಗುವಿನ ಮಧ್ಯದ ಸಂಬಂಧದ ಹಾಗೆ ಎಂದು ಹೇಳಿದ್ದಾರೆ. ಅಂದರೆ ಕಣ್ಣು ಮುಚ್ಚಿಕೊಂಡು ಅಲ್ಲಾಹನ ಕಡೆಗೆ ಓಡಬೇಕು.

ನೈತಿಕ ಗುಣಗಳ ಬಗ್ಗೆ ಹೇಳುವುದಾದರೆ ಹಝ್ರತ್ ಮುಹಮ್ಮದ್ﷺರ ಜೀವನ ಎಂತಹ ಸೂಕ್ಷ್ಮಾತಿಸೂಕ್ಷ್ಮ ನೈತಿಕ ಗುಣಗಳನ್ನು ಪ್ರದರ್ಶಿಸುತ್ತಿವೆ ಎಂದರೆ ಸೂಕ್ಷ್ಮ ದೃಷ್ಟಿಯಿಂದ ಪರಿಶೀಲಿಸುವವನು ಸಹ ಅವರಿಂದ ಮಾರ್ಗದರ್ಶನ ಪಡೆಯದೆ ಅವುಗಳನ್ನು ಕಾಣಲಾರನು. ಹಝ್ರತ್ ಮುಹಮ್ಮದ್ﷺರ ಜೀವನವನ್ನು ಅಧ್ಯಯನ ಮಾಡಿದರೆ ತಿಳಿಯಬಹುದು– ನೈತಿಕ ಗುಣಗಳಿಗೆ ಸಂಬಂಧಿಸಿ ದೊಡ್ಡ ದೊಡ್ಡ ವಿಷಯಗಳ ಬಗ್ಗೆ ಸಹ ಅವರು ಎಂತಹ ಉಪದೇಶ ನೀಡಿದರೆಂದರೆ, ಎಂತಹ ನಡೆವಳಿಕೆ ಪ್ರದರ್ಶಿಸಿದರೆಂದರೆ, ಅವುಗಳನ್ನು ಪರಿಶೀಲಿಸುವಾಗ 'ಅವರು ತಮ್ಮ ಜೀವಿತವನ್ನೆಲ್ಲಾ ನೈತಿಕ ಗುಣಗಳನ್ನು ಅಧ್ಯಯನ ಮಾಡುವುದರಲ್ಲಿ ಮಾತ್ರ ವಿನಿಯೋಗಿಸಿದರೇ ಮತ್ತು ಅದರ ಪಾಠ ಕಲಿಸುವುದರಲ್ಲಿ ಮಾತ್ರ ನಿರತರಾದರೇ' ಎಂದು ಭಾಸವಾಗುವುದು. ಮಾನವರ ಪರಸ್ಪರ ಸಂಬಂಧ, ಸಂಬಂಧಿಕರ ಪರಸ್ಪರ ಸಂಬಂಧ, ಮನುಷ್ಯನ ವೈಯಕ್ತಿಕ ನೈತಿಕ ಗುಣಗಳ ವಿವರಣೆ, ಸುಳ್ಳು, ವಂಚನೆ, ಕೆಟ್ಟ ಸಂಶಯದಿಂದ ದೂರ ಸರಿಯುವುದು, ಇವುಗಳಿಗೆ ಸಂಬಂಧಿಸಿ ಅವರ ಉಪದೇಶಗಳು ಮತ್ತು ಅವರ ನಡೆವಳಿಕೆ ಅತ್ಯಂತ ಪರಿಪೂರ್ಣವಾಗಿವೆ. ಯಾವುದೇ ವ್ಯಕ್ತಿ ಹಲವಾರು ಜೀವಿತಗಳನ್ನು ಹೊಂದಿದರೂ ಸಹ ಇಂತಹ ಉತ್ತಮ ಗುಣಮಟ್ಟಕ್ಕೆ ತಲಪಲಾರ. ಹಝ್ರತ್ ಮುಹಮ್ಮದ್ﷺರು ತೋರಿಸಿದ ಮಾದರಿಯನ್ನು ತೋರಿಸಲಾರ.

ನಾಗರಿಕ ಜೀವಿತಕ್ಕೆ ಸಂಬಂಧಿಸಿ ಸಹ ಹಝ್ರತ್ ಮುಹಮ್ಮದ್ﷺರು ನಮಗೆ ಉತ್ತಮ ಮಾರ್ಗದರ್ಶನ ನೀಡಿದ್ದಾರೆ. ನಗರದಲ್ಲಿ ಜೀವಿಸಲು ಮಾರ್ಗಗಳನ್ನು ತೆರೆದಿಡುವುದು, ನೀರನ್ನು ಸ್ವಚ್ಛವಾಗಿಡಲು ವ್ಯವಸ್ಥೆ ಮಾಡುವುದು ಮೊದಲಾದವುಗಳ ಬಗ್ಗೆ ಗಮನ ಹರಿಸಿದ್ದಾರೆ. ಹೊಸ ಬಡಾವಣೆಯ ವ್ಯವಸ್ಥೆ ಮಾಡಲು ದೊಡ್ಡ ದೊಡ್ಡ ಇಂಜಿನಿಯರುಗಳು ವಿಚಾರ ವಿನಿಮಯ ನಡೆಸುತ್ತಾರೆ. ಹಝ್ರತ್ ಮುಹಮ್ಮದ್ﷺರು ಇದರ ಬಗ್ಗೆ ಸಹ ನಮ್ಮ ಗಮನ ಸೆಳೆದಿದ್ದಾರೆ. ಮಾರ್ಗಗಳನ್ನು ಸ್ವಚ್ಛವಾಗಿಡುವ ಬಗ್ಗೆ ಅವರು ಸೂಚಿಸಿದ್ದಾರೆ. ಮನೆಗಳೊಳಗೆ ಗಾಳಿ ಸಂಚಾರ ಸುಗಮಗೊಳಿಸಲು ಅವರು ಮಾರ್ಗದರ್ಶನ ನೀಡಿದರು. ಎಲ್ಲ ಲೌಕಿಕ ವ್ಯವಹಾರಗಳ ಬಗ್ಗೆ ಮತ್ತು ಲೌಕಿಕ ವಸ್ತುಗಳ ಬಗ್ಗೆ ಅವರು ಉಪದೇಶಿಸಿದ್ದಾರೆ. ಸರಕಾರ ನಡೆಸುವ ಬಗ್ಗೆ, ಸಂಸ್ಕೃತಿ ಮತ್ತು ವಾಣಿಜ್ಯದ ಬಗ್ಗೆ, ಕೈಗಾರಿಕೆಗಳ ಬಗ್ಗೆ ಮತ್ತಿತರ ವಿಷಯಗಳ ಬಗ್ಗೆ ಸಂದರ್ಭ ದೊರೆತಾಗಲೆಲ್ಲಾ ಅವರು ವಿವರಿಸುತ್ತಿದ್ದರೆಂದು ಅವರ ಜೀವನ ಚರಿತ್ರೆಯ ಅಧ್ಯಯನದಿಂದ ತಿಳಿಯುತ್ತದೆ.

ಇನ್ನೊಂದು ಕಡೆ ಅಭಿವೃದ್ಧಿ ಹೊಂದಿದೆ ಎಂದು ಹೇಳಿಕೊಳ್ಳುವ ಪಶ್ಚಿಮದ ಗುಂಪು ಇದೆ. ಅವರ ಅಭಿಪ್ರಾಯ ಪ್ರಕಾರ ಧರ್ಮವನ್ನು ನಂಬುವ ಆವಶ್ಯಕತೆ ಇಲ್ಲ. ಧಾರ್ಮಿಕ ಉಪದೇಶಗಳ ಆವಶ್ಯಕತೆ ಇಲ್ಲ. ನೈತಿಕ ಗುಣಗಳಿಗೆ ಪಾವಿತ್ರ್ಯವಿಲ್ಲ. ಅವರು ಪ್ರತಿಯೊಂದು ವಿಚಾರವನ್ನು ಲೌಕಿಕ ದೃಷ್ಟಿಯಿಂದ ನೋಡುತ್ತಾರೆ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಒಮ್ಮೆ ಹೇಳಿದರು– "ಪಶ್ಚಿಮದ ದಾರ್ಶನಿಕರು ಈ ಕಾಲದಲ್ಲಿ ಹೀಗೆ ಹೇಳುತ್ತಾರೆ: ದೇವನು ಲೋಕವನ್ನು ಹೇಗೆ ಸೃಷ್ಟಿಸಿದನು ಎನ್ನುವುದು ನಮ್ಮ ಪ್ರಶ್ನೆಯಲ್ಲ. ಮನುಷ್ಯನು ದೇವನನ್ನು ಹೇಗೆ ಸೃಷ್ಟಿಸಿದನೆಂಬುದೇ ನಮ್ಮ ಮುಂದಿರುವ ಪ್ರಶ್ನೆಯಾಗಿದೆ– ಎಂದು (ನಊದುಃಬಿಲ್ಲಾಹ್). ಅವರ ದೃಷ್ಟಿಯಲ್ಲಿ ದೇವನ ಬಗ್ಗೆ ಪ್ರಶ್ನೆ ಉದ್ಭವಿಸುವುದು ಮನುಷ್ಯನ ವಿಕಾಸದ ಪರಿಣಾಮದಿಂದಾಗಿದೆ."

ಇಂದಿನ ಕಾಲದಲ್ಲಿ ಈ ಯೋಚನೆಯ ಕಾರಣದಿಂದ ದೇವನು ಮನುಷ್ಯನ ಸೃಷ್ಟಿ ಎಂದು ಭಾವಿಸಲಾಗುತ್ತಿದೆ. ಇಂದಿನ ಕಾಲದ ದಾರ್ಶನಿಕರು ನಾಸ್ತಿಕತೆಯ ಕಡೆಗೆ ಸಾಗಿದ್ದಾರೆ. ವಿದ್ಯಾಭ್ಯಾಸ ಮತ್ತು ವೈಚಾರಿಕತೆಯ ಹೆಸರಲ್ಲಿ ಪಶ್ಚಿಮದ ದೇಶವಾಸಿಗಳಲ್ಲಿ ಹೆಚ್ಚಿನವರು ದೇವನ ಅಸ್ತಿತ್ವವನ್ನು ನಿರಾಕರಿಸುವವರಾಗಿದ್ದಾರೆ. ಕೇವಲ ಉತ್ತಮ ಸ್ವಭಾವ ಗುಣ ಮತ್ತು ಲೌಕಿಕ ಅಭಿವೃದ್ಧಿಯೇ ಎಲ್ಲವೂ ಆಗಿದೆ ಎಂದು ಅವರು ಗಣಿಸುತ್ತಾರೆ. ಈ ನಾಸ್ತಿಕವಾದಿಗಳಾದ ಜನರ ಅಭಿಪ್ರಾಯಗಳಿಗೆ ಇಂದಿನ ಕಾಲದ ಮೌಲವಿಗಳು ಉತ್ತೇಜನ ನೀಡುತ್ತಿದ್ದಾರೆ. ಈ ಮೌಲವಿಗಳು ತಮ್ಮ ಸ್ವಂತ ಅಭಿಪ್ರಾಯಗಳನ್ನು ಧರ್ಮದ ಭಾಗವೆಂದು ಪ್ರತಿಪಾದಿಸುತ್ತಾ ವಿಚಿತ್ರವಾದ ಅಜ್ಞಾನವನ್ನು ಹರಡುತ್ತಿದ್ದಾರೆ. ಈ ರೀತಿ ನೋಡುವಾಗ ಇಂದಿನ ಕಾಲದ ಮೌಲವಿಗಳು ದಾರಿ ತಪ್ಪಿದವರಾಗಿದ್ದಾರೆ. ಅದೇ ರೀತಿ ಧರ್ಮವನ್ನು ಲೌಕಿಕತೆ ಎನ್ನುವವರು ಮತ್ತು ಧರ್ಮವನ್ನು ನಿರಾಕರಿಸುವವರೂ ಸಹ ತಪ್ಪು ಗ್ರಹಿಕೆ ಹೊಂದಿದವರಾಗಿದ್ದಾರೆ.

ಅಹ್ಮದಿಯರಾದ ನಾವು ಅದೃಷ್ಟಶಾಲಿಗಳಾಗಿದ್ದೇವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಮ್ಮನ್ನು ಇಂತಹ ತಪ್ಪು ಗ್ರಹಿಕೆಗಳಿಂದ ರಕ್ಷಿಸಿದ್ದಾರೆ. ಮತ್ತು ನಮಗೆ ಸರಿಯಾದ ಮಾರ್ಗದರ್ಶನ ನೀಡಿದ್ದಾರೆ. ಸತ್ಯವನ್ನು

ತಿಳಿಯಲು ಹಝ್ರತ್ ಮುಹಮ್ಮದ್صلى الله عليه وسلمರ ಕಡೆಗೆ ನೋಡಿರಿ ಎಂದು ಅವರು ಹೇಳಿದ್ದಾರೆ. ಪ್ರತಿಯೊಂದು ವಿಷಯದಲ್ಲಿ ಸಮತೋಲನವನ್ನೂ ನ್ಯಾಯವನ್ನೂ ಕಾಪಾಡಬೇಕೆಂದು ಹಝ್ರತ್ ಮುಹಮ್ಮದ್صلى الله عليه وسلمರು ಕಲಿಸಿರುತ್ತಾರೆ. ಇದೇ ಧರ್ಮದ ವಾಸ್ತವಿಕತೆಯಾಗಿದೆ.

ಹಝ್ರತ್ ಮುಹಮ್ಮದ್صلى الله عليه وسلم ಹೇಳಿದರು: ದೇವಾರಾಧನೆ ಆವಶ್ಯಕವಾಗಿದೆ. ಅದು ಮನುಷ್ಯನ ಸೃಷ್ಟಿಯ ಉದ್ದೇಶವೂ ಆಗಿದೆ. ಆದರೆ **ವಲಿ ನಫ್ಸಿಕ ಅಲೈಕ ಹಖ್ಖುನ್, ವಲಿ ಝೌಜಿಕ ಅಲೈಕ ಹಖ್ಖುನ್, ವಲಿ ಜಾರಿಕ ಅಲೈಕ ಹಖ್ಖುನ್.** (ನಿನ್ನ ಸ್ವಂತಕ್ಕೆ ಸಂಬಂಧಿಸಿ ನಿನಗೆ ಹೊಣೆಗಾರಿಕೆಗಳಿವೆ, ನಿನ್ನ ಪತ್ನಿಗೆ ಸಂಬಂಧಿಸಿ ಹೊಣೆಗಾರಿಕೆಗಳಿವೆ, ನಿನ್ನ ನೆರೆಹೊರೆಯವರಿಗೆ ಸಂಬಂಧಿಸಿ ಹೊಣೆಗಾರಿಕೆಗಳಿವೆ). ಎಂದು ಅವರು ಕಲಿಸಿದರು. ಇವುಗಳನ್ನು ಈಡೇರಿಸಲು ಮೂರು ಮಾರ್ಗಗಳನ್ನು ಅವಲಂಬಿಸಬೇಕಾಗಿದೆ. ಮೊದಲನೆಯದು ಪ್ರಾರ್ಥನೆಯಾಗಿದೆ. ಅಲ್ಲಾಹನ ಕಡೆಗೆ ಬಾಗಿ ಪ್ರಾರ್ಥಿಸಬೇಕು. ಎರಡನೆಯದು ಭಾವನೆಗಳನ್ನು ನಿಯಂತ್ರಿಸುವುದಾಗಿದೆ. ಆತ್ಮ ನಿಯಂತ್ರಣ ಮಾಡಿಕೊಳ್ಳಬೇಕು. ಮೂರನೆಯದಾಗಿ ತನ್ನ ಕೆಲಸವನ್ನು ನಿಷ್ಠೆಯಿಂದ ಮಾಡುವುದಾಗಿದೆ. ಲೌಕಿಕ ಜ್ಞಾನಗಳಿಸುವುದು ವೈಜ್ಞಾನಿಕ ಜ್ಞಾನಗಳಿಸುವುದು ಸಹ ಅತ್ಯಾವಶ್ಯಕವಾಗಿದೆ.

ಇಂದಿನ ಮುಸ್ಲಿಮರ ದುರವಸ್ಥೆಗೆ ಕಾರಣವೇನೆಂದರೆ, ಅವರು ತಮ್ಮ ಸ್ವಂತ ಭಾವನೆಗಳಿಗೆ ಧರ್ಮವೆಂದು ಹೆಸರು ನೀಡಿದರು. ಅಲ್ಲಾಹನು ಅವತೀರ್ಣ ಗೊಳಿಸಿದ ಧರ್ಮಕ್ಕೆ ಅವರು ಆದ್ಯತೆ ನೀಡಲಿಲ್ಲ. ಅವರು ಅದಕ್ಕೆ ಆದ್ಯತೆ ನೀಡುತ್ತಿದ್ದರೆ ಉಳಿದ ವಿಷಯಗಳ ಬಗ್ಗೆ ಸಹ ಅವರು ಗಮನ ಹರಿಸುತ್ತಿದ್ದರು. ಅವರು ತಮ್ಮ ಭಾವೋದ್ವೇಗಗಳಿಗೆ ಧರ್ಮವೆಂದು ಹೆಸರಿಸಿ ಅದಕ್ಕನುಸಾರವಾಗಿ ಕರ್ಮಗಳನ್ನು ಮಾಡುತ್ತಾರೆ. ಇದರ ಪರಿಣಾಮವೇನಾಯಿತೆಂದರೆ ಇಂತಹ ಜನರು ಇಸ್ಲಾಮಿನ ಸೌಂದರ್ಯವನ್ನು ಅನ್ಯರಿಗೆ ತೋರಿಸುವ ಮಾತು ಬಿಡಿ, ಅವರು ಸ್ವತಃ ನಿರ್ಮಿಸಿದ ಈ ಸ್ವಾರ್ಥ ಧರ್ಮದ ಅನುಸರಣೆಯನ್ನು ಮಾಡಿ ಮುಸ್ಲಿಮರೇ ಮುಸ್ಲಿಮರ ಕೊರಳುಗಳನ್ನು ಕತ್ತರಿಸುವಂತಹ ಸ್ಥಿತಿಗೆ ತಲಪಿದ್ದಾರೆ. ಇಂತಹ ಜನರಿಗೆ ಧರ್ಮವೂ ಸಿಗಲಿಲ್ಲ ಲೌಕಿಕ ಲಾಭವೂ ದೊರಕಲಿಲ್ಲ. ಅವರು ತಮ್ಮ ಸಮಸ್ಯೆಗಳ ನಿವಾರಣೆಗೆ ಲೌಕಿಕ ವಾದಿಗಳ ಮುಂದೆ ಕೈ ಚಾಚಬೇಕಾದ ಸ್ಥಿತಿಗೆ ತಲಪಿದ್ದಾರೆ. ಇಂದಿನ ಮುಸ್ಲಿಮ್ ಲೋಕದಲ್ಲಿ ನಮಗೆ ಇದು ಕಾಣಿಸುತ್ತಾ ಇದೆ. ಪಶ್ಚಿಮದ ಜನಾಂಗಗಳು ಧರ್ಮವನ್ನು ಲೌಕಿಕತೆಗೆ ಅಧೀನಗೊಳಿಸಿದ್ದಾರೆ. ಅವರ ದೃಷ್ಟಿಯಲ್ಲಿ ಧರ್ಮಕ್ಕೆ ಮಹತ್ವವಿಲ್ಲ. ಲೌಕಿಕ ಲಾಭವೇ ಎಲ್ಲವೂ ಆಗಿದೆ. ಈ ಜನಾಂಗಗಳು ಲೌಕಿಕ ಅಭಿವೃದ್ಧಿಯಂತೂ ಗಳಿಸಿರುತ್ತಾರೆ. ಈ ಜನರು ನಿಶ್ಚಯವಾಗಿಯೂ ದಾರಿತಪ್ಪಿದವರೇ ಆಗಿದ್ದಾರೆ. ಆದರೆ ಅವರು ತಮ್ಮ ಉದ್ದೇಶದ ಗಳಿಕೆಯಲ್ಲಿ ಸಫಲರಾಗಿದ್ದಾರೆ. ತಪ್ಪು ಮಾರ್ಗ ಅವಲಂಬಿಸಿದರೂ ಲೌಕಿಕ ವಿಷಯದಲ್ಲಿ ಅವರು ಯಶಸ್ವಿಗಳಾಗಿದ್ದಾರೆ. ಆದರೆ ಮುಸ್ಲಿಮರಿಗೆ ಧರ್ಮವೂ ಸಿಗಲಿಲ್ಲ ಲೌಕಿಕ ಲಾಭವೂ ಸಿಗಲಿಲ್ಲ.

ಇಂತಹ ಎರಡು ವಿಧಗಳ ಜನರ ಸುಧಾರಣೆಗೋಸ್ಕರ ಅಲ್ಲಾಹನು ಈ ಕಾಲಘಟ್ಟದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಕಳುಹಿಸಿದ್ದಾನೆ. ಇಂತಹ ಪರಿಸ್ಥಿತಿಯಲ್ಲೇ ಅಲ್ಲಾಹನು ಜನರ ಮಾರ್ಗದರ್ಶಕ್ಕಾಗಿ, ಅಂದರೆ ಧರ್ಮವನ್ನು ಧರ್ಮದ ಸ್ಥಾನದಲ್ಲೂ ಸದ್ಗುಣಗಳನ್ನು ಸದ್ಗುಣಗಳ ಸ್ಥಾನದಲ್ಲೂ ಮತ್ತು ಲೌಕಿಕ ವಿಷಯಗಳನ್ನು ಅದರ ಸ್ಥಾನದಲ್ಲೂ ಇರಿಸಿ ಜನರಿಗೆ ಸರಿಯಾದ ರೀತಿಯಲ್ಲಿ ಮಾರ್ಗದರ್ಶನ ನೀಡಲಿಕ್ಕಾಗಿ ಅಲ್ಲಾಹನು ತನ್ನಿಂದ ನೇಮಿಸಲ್ಪಟ್ಟವರನ್ನು ಕಳುಹಿಸುತ್ತಾನೆ. ಬಾಹ್ಯವಾಗಿ ನೋಡಿದರೆ ಅವರು ಆಧ್ಯಾತ್ಮಿಕ ಸಂದೇಶ ತೆಗೆದುಕೊಂಡು ಬರುತ್ತಾರೆ. ಆದರೆ ಮೇಲೆ ವಿವರಿಸಿದ ಮೂರು ವಿಷಯಗಳಿಗೂ ಅವರ ಸಂದೇಶದೊಂದಿಗೆ ಗಾಢವಾದ ಸಂಬಂಧವಿದೆ. ಆಧ್ಯಾತ್ಮಿಕತೆಯಲ್ಲಿ ಪರಿಪೂರ್ಣತೆಗಳಿಸಿದಾಗ ಸ್ವಭಾವ ಗುಣಗಳು ಸರಿಯಾಗುವುದು ಅನಿವಾರ್ಯವಾಗಿದೆ. ಸ್ವಭಾವ ಗುಣಗಳನ್ನು ವೀಕ್ಷಿಸಿ ಸರಿಪಡಿಸುವಾಗ ಲೌಕಿಕ ಅಭಿವೃದ್ಧಿ ಗಳಿಸುವುದು ಸಹ ಅನಿವಾರ್ಯವಾಗುತ್ತದೆ.

ಆದರೆ ಒಬ್ಬನ ಲೌಕಿಕ ಸ್ಥಿತಿ ಸರಿಯಾದ ಮಾತ್ರಕ್ಕೆ ಅವನಿಗೆ ಈ ಲೋಕದಲ್ಲಿ ಎಲ್ಲವೂ ದೊರೆತಂತಾಗಲಾರದು. ಅವನ ಸ್ವಭಾವ ಗುಣಗಳು ಸರಿಯಾಗಬಹುದೆಂದು ಹೇಳಲಾಗದು. ಅವನ ಧರ್ಮವೂ ಸರಿಯಾಗಿದೆ ಎಂದು ಹೇಳಲಾಗದು. ಇದಕ್ಕೆ ಕಾರಣವೇನೆಂದರೆ ಅಲ್ಲಾಹನ ಉದ್ದೇಶ ಮನುಷ್ಯನನ್ನು ತನ್ನ ಕಡೆಗೆ ತರುವುದಾಗಿದೆ. ಮನುಷ್ಯನ ಸೃಷ್ಟಿಯ ಉದ್ದೇಶಲಕ್ಷ್ಯವೂ ಇದೇ ಆಗಿದೆ. ಆದುದರಿಂದ ಅಲ್ಲಾಹನು ಮನುಷ್ಯನ ಸ್ವಭಾವ ಗುಣಗಳ ಸರಿಪಡಿಸುವಿಕೆ ಮತ್ತು ಲೌಕಿಕ ಅಭಿವೃದ್ಧಿಯನ್ನು ಧರ್ಮಕ್ಕೆ ಅಧೀನಗೊಳಿಸಿರುತ್ತಾನೆ. ಯಾರು ಅಲ್ಲಾಹನ ಕಡೆಗೆ ಗಮನ ಹರಿಸುತ್ತಾನೋ ಅವನಿಗೆ ಇತರ ಎಲ್ಲವೂ ತಾನಾಗಿಯೇ ಲಭಿಸುತ್ತವೆ.

ಪರಿಪೂರ್ಣ ವಿಶ್ವಾಸಿಗೆ ಎಲ್ಲ ಅಭಿವೃದ್ಧಿಗಳು ಲಭಿಸುತ್ತವೆ ಎಂದು ಅಲ್ಲಾಹನು ಹೇಳುತ್ತಾನೆ. ಆದರೆ ಲೌಕಿಕ ವಾದಿಗಳ ಬಗ್ಗೆ ಅಲ್ಲಾಹನು ಹೇಳುವುದೇನೆಂದರೆ, **ಝುಲ್ಲ ಸಅ್ಯುಹುಮ್ ಫಿಲ್ ಹಯಾತುದ್ದುನ್ಯಾ** ಅವರ ಎಲ್ಲ ಪ್ರಯತ್ನಗಳು ಈ ಲೋಕದಲ್ಲೇ ಅದೃಶ್ಯವಾಗುತ್ತವೆ ಎಂದು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಇದರ ಉದಾಹರಣೆ ನೀಡುತ್ತಾ ಈ ರೀತಿ ಹೇಳುತ್ತಾರೆ: "ಆಧ್ಯಾತ್ಮಿಕತೆಯನ್ನು ಅವಲಂಬಿಸುವವರಿಗೆ ಎಂದರೆ ಮೇಲಿನಿಂದ ಕೆಳಗೆ ಇಳಿಯುವವರಿಗೆ ಏಣಿ ಇದೆ. ಆದರೆ ಕೆಳಗಿನಿಂದ ಮೇಲೆ ಹೋಗಲು ಬಯಸುವವರಿಗೆ ಏಣಿ ಇಲ್ಲ."

ಲೋಕದಲ್ಲಿ ಮೇಲೆ ವಿವರಿಸಿದ ಮೂರು ವಿಷಯಗಳನ್ನು ಗಳಿಸಲು ಬೇರೆ ಬೇರೆ ಮಾರ್ಗಗಳಿವೆ. ಆದರೆ ಒಂದು ಮಾರ್ಗವನ್ನು ಅವಲಂಬಿಸುವುದರಿಂದ ಮೂರು ವಿಷಯಗಳೂ ದೊರಕುತ್ತವೆ. ಅದು ಅಲ್ಲಾಹನೊಂದಿಗೆ ಪರಿಪೂರ್ಣ ಸಂಬಂಧ ಸ್ಥಾಪಿಸುವುದಾಗಿದೆ. ಸದ್ಗುಣಗಳಿಗೋಸ್ಕರ ಪ್ರಯತ್ನ ಮಾಡುವವರಿಗೆ ಸದ್ಗುಣಗಳು ಲಭಿಸುವುವು. ಲೌಕಿಕ ಲಾಭಕ್ಕೆ ಪ್ರಯತ್ನಿಸುವವರಿಗೆ ಲೌಕಿಕ ಲಾಭ ಸಿಗುವುದು. ಪ್ರತಿಯೊಂದು

ಪ್ರಯತ್ನದ ಪರಿಣಾಮ ಅದರ ವಲಯದೊಳಗೆ ಸೀಮಿತವಾಗಿದೆ. ಅದರಿಂದ ಹೊರಗೆ ಹೋಗಲಾರರು. ಆದರೆ ಆಧ್ಯಾತ್ಮಿಕತೆ ಸರಿಪಡಿಸುವವರಿಗೆ ಎಲ್ಲ ವಸ್ತುಗಳೂ ಲಭಿಸುವ್ರುವು. ಮನುಷ್ಯನು ದೇವನ ಕಡೆಗೆ ಸಾಗಿದರೆ ಹಿಂದಿನ ಕಾಲದ ಜನರೊಂದಿಗೆ ದೇವನು ಹೇಗೆ ವರ್ತಿಸಿದನೋ ಅದೇ ರೀತಿ ಅಲ್ಲಾಹನು ಅವನೊಂದಿಗೆ ವರ್ತಿಸುವನು. ಈ ಕಾಲದಲ್ಲೂ ಹೀಗೆಯೇ ಸಂಭವಿಸುತ್ತದೆ. ಆದರೆ ಮನುಷ್ಯನು ಪ್ರಾಮಾಣಿಕವಾದ ಪ್ರಯತ್ನ ಮಾಡಿದರೆ ಮಾತ್ರ ಹೀಗೆ ಆಗುವುದು ಅಲ್ಲಾಹನಿಗೆ ಯಾರೊಂದಿಗೂ ಶತ್ರುತ್ವವಿಲ್ಲ. ಆವಶ್ಯಕವಾಗಿರುವುದೇನೆಂದರೆ ನಾವು ನಮ್ಮನ್ನು ಸಂಪೂರ್ಣವಾಗಿ ಅಲ್ಲಾಹನ ಮುಂದೆ ಹಾಕಬೇಕು. ಅವನ ಆಸ್ಥಾನದ ಮುಂದೆ ನಮ್ಮನ್ನು ನಾವು ಬೀಳಿಸಿಕೊಂಡರೆ ಆಗ ತಾನಾಗಿಯೇ ಎಲ್ಲವೂ ಸಿಗುವುದು. ನಮಗೆ ಆವಶ್ಯಕವಾದ ಅಭಿವೃದ್ಧಿ ತಾನಾಗಿಯೇ ನಮಗೆ ಲಭಿಸುವುದು. ಒಂದು ಸಾಮಾನ್ಯ ಉದಾಹರಣೆ ಹೀಗಿದೆ: ಬೆಂಕಿಯ ಮುಂದೆ ಕುಳಿತಾಗ ಮನುಷ್ಯನ ಅಂಗಾಂಗಗಳು ಬಿಸಿಯಾಗುತ್ತವೆ. ಹೀಗಿರುವಾಗ ಎಲ್ಲವನ್ನೂ ಬಿಟ್ಟು ದೇವನ ಸಮೀಪ ಮನುಷ್ಯನು ಬರುವಾಗ ಅವನು ದೇವನ ಅನುಗ್ರಹದಿಂದ ಪಾಲು ಪಡೆಯದಿರಲು ಹೇಗೆ ಸಾಧ್ಯ? ಆದುದರಿಂದ ನಾವು ದೇವನ ಸಾಮೀಪ್ಯ ಗಳಿಸಲು ಪ್ರಯತ್ನ ಮಾಡಬೇಕು. ಅಲ್ಲಾಹನು ಕಳುಹಿಸಿಕೊಟ್ಟ ಧರ್ಮದ ವಾಸ್ತವಿಕತೆಯನ್ನು ಅರಿತುಕೊಳ್ಳಬೇಕು. ಅಲ್ಲಾಹನ ಬಗ್ಗೆ ಇರುವ ನಮ್ಮ ಪ್ರೀತಿಯು ನಮ್ಮ ಸಹಜ ಪ್ರಕೃತಿಯಾಗಬೇಕು. ಇದು ನಮ್ಮ ಸ್ವಭಾವ ಗುಣಗಳನ್ನು ಉನ್ನತ ಮಟ್ಟಕ್ಕೇರಿಸುವಂತಹದೂ ಆಗುವುದು. ನಾವು ಲೌಕಿಕ ಲಾಭಗಳಿಸುವವರೂ ಆಗುವೆವು. ಅಲ್ಲಾಹನ ಪ್ರಕಾಶದಿಂದ ನಾವು ಪಾಲು ಪಡೆಯಲು ಪ್ರಯತ್ನ ಮಾಡುವುದಾದರೆ ನಾವು ವಾಸ್ತವಿಕವಾಗಿ ಅನುಗ್ರಹ ಪಡೆಯುವವರಾಗುವೆವು. ನಾವು ನಿರಂತರವಾಗಿ ಎಡೆಬಿಡದೆ ಈ ಪ್ರಕಾಶದ ಪಾಲುಪಡೆಯಲು ಪ್ರಯತ್ನಿಸಿದರೆ ಸುಳ್ಳು ಎಂಬ ಅಂಧಕಾರ ನಮ್ಮಿಂದ ತಾನಾಗಿ ದೂರ ಸರಿಯುವುದು. ಸೋಮಾರಿತನ, ವಂಚನೆ, ಅನ್ಯರ ಹಕ್ಕು ಅಪಹರಿಸುವುದು ಇವೆಲ್ಲವೂ ಅಂಧಕಾರಗಳಾಗಿವೆ. ಇವುಗಳು ಸಹ ತಾನಾಗಿ ನಮ್ಮಿಂದ ದೂರ ಸರಿಯುವುವು. ಅಲ್ಲಾಹನ ಪ್ರಕಾಶದ ಕಾರಣದಿಂದ ನಮ್ಮ ಸ್ವಭಾವ ಗುಣಗಳು ಸಹ ಉನ್ನತವಾಗುತ್ತಾ ಹೋಗುವುವು. ಲೌಕಿಕ ಅಭಿವೃದ್ಧಿ ಸಹ ಲಭಿಸುವುದು. ಆದುದರಿಂದ ಈ ಸಮಾಜದಲ್ಲಿ ನಾವು ನಮ್ಮ ಸಂತಾನಗಳನ್ನು ಲೌಕಿಕವಾದ ಕೆಟ್ಟ ಪ್ರಭಾವಗಳಿಂದ ರಕ್ಷಿಸಬೇಕಾದರೆ ಅವರಿಗೆ ಧರ್ಮ ಮತ್ತು ಸದ್ಗುಣಗಳ ಸಂಬಂಧವನ್ನು ಮನವರಿಕೆ ಮಾಡಿಕೊಡಬೇಕು. ಲೌಕಿಕ ಅಭಿವೃದ್ಧಿ ಸಹ ವಾಸ್ತವಿಕ ಧರ್ಮಾಚರಣೆಯಿಂದ ಲಭಿಸುವುದೆಂದು ಸಾಬೀತುಗೊಳಿಸಿ ಅವರನ್ನು ಧರ್ಮದೊಂದಿಗೆ ಜೋಡಿಸಬೇಕು. ಅಲ್ಲಾಹನೊಂದಿಗೆ ವಾಸ್ತವಿಕ ಸಂಬಂಧ ಹೊಂದುವಂತೆ ನಮ್ಮ ಸಂತಾನಗಳಿಗೋಸ್ಕರ ನಾವು ಪ್ರಯತ್ನ ಮಾಡಬೇಕು. ಅಲ್ಲಾಹನು ನಮಗೆ ಆ ಭಾಗ್ಯ ನೀಡುವವನಾಗಲಿ – ಆಮೀನ್.

––––––––––––––––*******––––––––––––––

*Friday Sermon delivered by Hadrath Khaleefatul Masih Al Khamis*$^{(atba)}$

*at Masjid Baithul Futhuh, London on 24-04-2015.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email*:** *khutuba.kannada@gmail.com*

**You can find all the Sermons archived at**: www.alislam.org/friday-sermon